ಹೇಳಿದ್ದಾರೆ. ಎಲ್ಲ ಕೆರೆಗಳನ್ನೂ ತುಂಬಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ನೀವು ನಾಲ್ಕು ವರ್ಷಗಳಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಈ ಸದನಕ್ಕೆ ತಿಳಿಸಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಬಹುತೇಕವಾಗಿ ಎಲ್ಲ ಕಾರ್ಯಗಳು ಅಗಿದ್ದು ಇನ್ನು ಇ,ಪಿ.ಸಿ. ಕಾಂಟ್ರಾಕ್ಟ್ ಇದೆ ಅವರು ತಮ್ಮ ಪ್ರಪೋಸಲ್ ಅನ್ನು ಕೊಟ್ಟಿದ್ದರೆ. ಟಿ.ಎ.ಸಿ. ಯವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಕೂಡಲೇ ಅದಕ್ಕೆ ಎಲ್ಲ ರೀತಿಯ ಅನುಮೋದನೆ ಸಿಗುತ್ತದೆ. ನಾಲ್ಕು ವರ್ಷದಲ್ಲಿ ಸಂಪೂರ್ಣವಾಗಿ ಮುಗಿಸುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ತರೀಕೆರೆ ತಾಲ್ಲೂಕಿನ ಬಗ್ಗೆ ಹೇಳಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸದಸ್ಯರು ಕೇಳಿರುವುದು ಪ್ರಶ್ನೆ ವ್ಯಾಪ್ತಿಯಲ್ಲಿ ಬರುತ್ತಿಲ್ಲವಾದರೂ ಅವರಿಗೆ ಉತ್ತರ ಕೊಡಬಯಸುತ್ತೇನೆ. ತರೀಕೆರೆ ಭಾಗದಲ್ಲಿರುವಂಥ ರೈತರ ಆತಂಕವೇನಿದೆ ಅದನ್ನು ಸಂಪೂರ್ಣ ಹೋಗಲಾಡಿಸಲು ಈಗಾಗಲೇ ಟಿ.ಎ.ಸಿ. ಅಧ್ಯಕ್ಷರಾದ ದೇಸಾಯಿಯವರಿಗೆ ಹೇಳಿದ್ದೇನೆ. ಆ ಭಾಗದ ರೈತರ ಸಭೆಯನ್ನು ಅವರು ಕರೆಯುತ್ತಾರೆ. ಅವರನ್ನು ಅಲ್ಲಿಗೆ ಕಳುಹಿಸಬೇಕು, ಅಥವಾ ಅವರನ್ನೇ ಇಲ್ಲಿಗೆ ಕರೆಸಿ ಏನೇನು ಆತಂಕಗಳಿವೆ ಟನೆಲ್ ಆದರೆ ಅಲ್ಲಿರುವಂಥ ನೀರು ಬತ್ತು ಹೋಗುತ್ತದೆ, ನೀರು ಟೆನಲ್‌ನಲ್ಲಿ ಸೋರಿಹೋಗಿಬಿಡುತ್ತದೆ ಮತ್ತು ಬಾಗಲೂರು ನವಿಲೆ ರೀತಿಯಾಗುತ್ತದೆ, ಹೀಗೆ ಇವೆಲ್ಲಾ ಆತಂಕಗಳಿಗೆ ಟೆಕ್ನಿಕಲ್ ಕಮಿಟಿಯವರು ಏನೇನು ವರದಿಯನ್ನು ಇದುವರೆಗೆ ಪರಿಶೀಲನೆ ಮಾಡಿದ್ದಾರೆ ಆ ಬಗ್ಗೆ ರೈತರ ಜೊತೆ ಚರ್ಚೆ ಮಾಡಿ ಅವರಿಗೆ ಕನ್‌ವಿನ್ಸ್ ಮಾಡಿ ಸಮಾಧಾನ ಮಾಡಿ ಅದಕ್ಕೇನಾದರೂ ಬದಲಾವಣೆ ಮಾಡುವ ಅವಶ್ಯಕತೆ ಇದ್ದರೂ ಕೂಡ ಮಾಡುವುದಕ್ಕೆ ನೀವೆಲ್ಲಾ ಸಿದ್ಧರಾಗಬೇಕು ಎನ್ನುವ ಮಾತನ್ನು ಕುಡ ಹೇಳಿದ್ದೇವೆ.

ಕೆ.ಆರ್. ಎಸ್. ಅಣೆಕಟ್ಟು ಪ್ರದೇಶದ ಸಂಪರ್ಕ ರಸ್ತೆಗಳ ದುರಸ್ಥಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	67 (383)
ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್. ಎಂ. (ಮಂಡ್ಯ)
ಉತ್ತರಿಸುವ ಸಚಿವರು	:	ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ ಕೆ.ಆರ್.ಎಸ್. ಅಣೆಕಟ್ಟು ಪ್ರದೇಶ ಹಾಗೂ ಅದಕ್ಕೆ ಸೇರುವ ಎಲ್ಲಾ ಕಾಲುವೆಗಳ ಸಮೀಪದ ಸಂಪರ್ಕ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕಾವೇರಿ ನೀರಾವರಿ ನಿಗಮಕ್ಕೆ ಸರ್ಕಾರದಿಂದ ಒದಗಿಸುವ ವಾರ್ಷಿಕ ಅನುದಾನದಲ್ಲಿ ನಿಗಮದ ವ್ಯಾಪ್ತಿಯಲ್ಲಿ ಬರುವ "ರಸ್ತೆಗಳು– 3054" ಶೀರ್ಷಿಕೆಯಲ್ಲಿ ನಿಗದಿಪಡಿಸುವ ಅನುದಾನದ ಮೇರೆಗೆ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಕಾಲದಿಂದ ಕಾಲಕ್ಕೆ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. 2008–09ನೇ ಸಾಲಿನಲ್ಲಿ ಕೃಷ್ಣರಾಜಸಾಗರ ಯೋಜನೆಯ ಅಚ್ಚುಕಟ್ಟು ರಸ್ತೆಗಳ ಅಭಿವೃದ್ಧಿಗೆ ಕಾವೇರಿ ನೀರಾವರಿ ನಿಗಮಕ್ಕೆ ರೂ. 330.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಆದ್ಯತೆಯ ಮೇರೆಗೆ ಈ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಲದೆ, ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಬೆಳಗೊಳ ವೃತ್ತದಿಂದ ಬೃಂದಾವನ ಉದ್ಯಾನವನಕ್ಕೆ ಹೋಗುವ ರಸ್ತೆಯನ್ನು ಸಹಾ ಒಟ್ಟು ರೂ. 523.00 ಲಕ್ಷದ ಅಂದಾಜು ವೆಚ್ಚದಲ್ಲಿ 2008–09 ನೇ ಸಾಲಿನಲ್ಲಿ ಉನ್ನತೀಕರಿಸಲಾಗುತ್ತಿದೆ.

ಇ ಕಳೆದ 3 ವರ್ಷಗಳಲ್ಲಿ ಸದರಿ ರಸ್ತೆಗಳ ದುರಸ್ಥಿ ಕಾರ್ಯಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು? ಖರ್ಚು ಮಾಡಿದ ಹಣ ಎಷ್ಟು? (ವಿವರ ನೀಡುವು)

ಕಳೆದ ಮೂರು ವರ್ಷಗಳಲ್ಲಿ ಕೃಷ್ಣರಾಜಸಾಗರ ಯೋಜನೆಯ ಅಚ್ಚುಕಟ್ಟು ರಸ್ತೆಗಳ ಅಭಿವೃದ್ಧಿಗೆ ಕಾವೇರಿ ನೀರಾವರಿ ನಿಗಮಕ್ಕೆ ನಿಗದಿಪಡಿಸಿದ್ದ ಅನುದಾನ ಮತ್ತು ಆಗಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ
2005–06	376.50	289.16
2006–07	301.98	275.08
2007–08	430.00	356.20
ಒಟ್ಟು:–	**1108.48**	**920.44**

ಈ ಜನರು, ಜಾನುವಾರುಗಳು ಮತ್ತು ವಾಹನ ಸಂಚಾರಕ್ಕೆ ತೀರ ಅನಾನುಕೂಲ ಸ್ಥಿತಿಯಲ್ಲಿರುವ ಸದರಿ ರಸ್ತೆಗಳನ್ನು ವ್ಯವಸ್ಥಿತಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಸದರಿ ರಸ್ತೆಗಳನ್ನು ವ್ಯವಸ್ಥಿತಗೊಳಿಸಲು ಪ್ರತಿ ವರ್ಷ ಅಚ್ಚುಕಟ್ಟು ರಸ್ತೆ ಶೀರ್ಷಿಕೆಯಡಿಯಲ್ಲಿ ಒದಗಿಸುವ ಅನುದಾನಕ್ಕೆ ತಕ್ಕಂತೆ ಆದ್ಯತೆ ಮೇರೆಗೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಕೆ.ಆರ್.ಎಸ್. ಅಣೆಕಟ್ಟು ಪ್ರದೇಶ ಹಾಗೂ ಅದಕ್ಕೆ ಸೇರುವ ಎಲ್ಲಾ ಕಾಲುವೆಗಳ ಸಮೀಪದ ಸಂಪರ್ಕ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿರುವುದಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಜೊತೆಯಲ್ಲಿ 2008–09ನೇ ಸಾಲಿನಲ್ಲಿ 3054 ಶೀರ್ಷಿಕೆಯಡಿಯಲ್ಲಿ 330.00 ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಒದಗಿಸಲಾಗಿದೆ ಎಂದಿದ್ದಾರೆ. ಕಾಲುವೆಗಳಿಗೆ ಸಂಪರ್ಕ ರಸ್ತೆಗಳು ಸರಿಯಾಗಿರುವುದಿಲ್ಲ. ಇಲ್ಲಿ ವಾಹನಗಳು ಓಡಾಡುವುದಕ್ಕೆ, ಜನರು ಆ ರಸ್ತೆಯಲ್ಲಿ ಓಡಾಡಲು ಕೂಡ ಆಗುವುದಿಲ್ಲ. ಯಾವ ರಸ್ತೆಗಳನ್ನು ದುರಸ್ತಿ ಮಾಡಿಸಲಾಗುವುದು ಎಂದು ನಿಖರವಾಗಿ ಹೇಳಿರುವುದಿಲ್ಲ. ಇದರಲ್ಲಿ ನನ್ನ ಕ್ಷೇತ್ರ ವ್ಯಾಪ್ತಿಯ 15 ರಿಂದ 21 ಕಿ.ಮೀ.ವರೆಗೆ, ಕಾಲುವೆಗಳಿಗೆ ಒಂದೂ ರಸ್ತೆಗಳು ಇಲ್ಲ, ದಯಮಾಡಿ ಅಲ್ಲಿ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. 2008–09ನೇ ಸಾಲಿಗೆ 330 ಲಕ್ಷ ರೂಪಾಯಿಗಳ ಅನುದಾನವನ್ನು ಈಗಾಗಲೇ ಒದಗಿಸಲಾಗಿದೆ. ಆ ಕಾರ್ಯ ನಡೆಯುತ್ತಿದೆ. ಇನ್ನೊಂದು ಮಂಡ್ಯ ನ್ಯಾಷನಲ್ ಪೇಪರ್‌ನ ಬೆಳಗೊಳ ವೃತ್ತದಿಂದ ಬೃಂದಾವನಕ್ಕೆ ಸುಮಾರು 5 ಕೋಟಿ 23 ಲಕ್ಷ ರೂಪಾಯಿಗಳಲ್ಲಿ ರಸ್ತೆ ಮಾಡುವ ಕೆಲಸವನ್ನು ಈಗ ತೆಗೆದುಕೊಂಡಿದ್ದೇವೆ. ಈ ಕಾಡಾ ರಸ್ತೆಗಳಲ್ಲಿ 1313 ಕಿ.ಮೀ. ನಲ್ಲಿ ಈಗಾಗಲೇ ಸುಮಾರು 800 ಕಿ.ಮೀ. ರಸ್ತೆಗಳು ಒಳ್ಳೆಯ ಸ್ಥಿತಿಯಲ್ಲಿವೆ. ಇನ್ನು 500 ಕಿ.ಮೀ. ರಸ್ತೆಯಲ್ಲಿ ಸಾಕಷ್ಟು ರಿಪೇರಿ ಆಗಬೇಕಾಗಿದೆ. ಈ ವರ್ಷ ಸುಮಾರು 100 ಕಿ.ಮೀ. ತೆಗೆದುಕೊಂಡಿದ್ದೇವೆ. 330 ಲಕ್ಷ ರೂಪಾಯಿಗಳನ್ನು ಅದಕ್ಕೆ ಒದಗಿಸಿದ್ದೇವೆ. ಎಲ್ಲಿ ನಿಜವಾಗಿಯೂ ಕೂಡ ಯಾವುದೇ ರೀತಿಯ ಸಂಪರ್ಕವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಅಂಥ ರಸ್ತೆಗಳ ಬಗ್ಗೆ ಈಗಾಗಲೇ ಅವರು ಹೇಳಿದರು. ಅವರ ಕ್ಷೇತ್ರದಲ್ಲಿ ಬರುವಂಥದ್ದು 15 ರಿಂದ 21 ಕಿ.ಮೀ. ಬಗ್ಗೆ. ಎಲ್ಲಿ ನಿಜವಾಗಿ ಸಂಪರ್ಕ ಆಗುವುದೇ

ಇಲ್ಲ ಎಂಬುದು ನನ್ನ ಗಮನಕ್ಕೆ ಬಂದರೆ ಅಲ್ಲಿ ಕೂಡಲೇ ರಿಪೇರಿ ಕೆಲಸವನ್ನು ತೆಗೆದುಕೊಳ್ಳಲು ನಾನು ಆದೇಶವನ್ನು ಕೊಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್:– 15 ನೇ ಕಿ.ಮೀ. ನಿಂದ 21ನೇ ಕಿ.ಮೀ. ವರೆಗೆ.

ಶ್ರೀ ಬಸವರಾಜ ಬೊಮ್ಮಾಯಿ:– ಆಯಿತು, ಮಾಡಿಸೋಣ. ಮಾಡಿಸೋಣ.

ಹೊಗೇನಿಕಲ್ ಪ್ರದೇಶವನ್ನು ಸರ್ವೆಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	68(120)
ಸದಸ್ಯರ ಹೆಸರು	:	ಶ್ರೀ ಪುಟ್ಟೇಗೌಡ ಸಿ.ಎಸ್ (ಶ್ರವಣಬೆಳಗೊಳ)
ವಿಷಯ	:	ಕರ್ನಾಟಕ ಮತ್ತು ತಮಿಳುನಾಡು ಗಡಿ ಹೊಗೇನಕಲ್ ಪ್ರದೇಶವನ್ನು ಸರ್ವೆ ಮಾಡುವುದು.
ಉತ್ತರಿಸುವ ಸಚಿವರು	:	ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

(ಅ) ಕರ್ನಾಟಕ ಮತ್ತು ತಮಿಳುನಾಡು ಗಡಿ ಪ್ರದೇಶದಲ್ಲಿರುವ ಹೊಗೇನಕಲ್ ಪ್ರದೇಶವನ್ನು ಸರ್ವೆ ಮಾಡಿಸಿ ಗಡಿಯನ್ನು ಗುರುತಿಸುವ ಕಾರ್ಯವನ್ನು ಸರ್ಕಾರ ಕೈಗೊಂಡಿದೆಯೇ, ತಿಳಿಸುವುದು.

– ಹೌದು–

ಕರ್ನಾಟಕ ಮತ್ತು ತಮಿಳುನಾಡು ಗಡಿಯ ಪರಿಶೀಲನೆ ಕಾರ್ಯಕ್ಕೆ ಎರಡು ರಾಜ್ಯಗಳ ಅಧಿಕಾರಿಗಳ ಜಂಟಿ ಸರ್ವೆ ತಂಡವನ್ನು ರಚಿಸಲಾಗಿತ್ತು. ಈ ಬಗ್ಗೆ ದಿನಾಂಕ: 10–03–2006 ರಂದು ಮೈಸೂರಿನಲ್ಲಿ. ಎರಡು ರಾಜ್ಯಗಳ ಅಧಿಕಾರಿಗಳ ಜಂಟಿ ಸಭೆ ನಡೆಸಿ ದಿನಾಂಕ: 05–04–2006 ರಿಂದ ಸದರಿ ಕಾರ್ಯವನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು. ತದನಂತರದಲ್ಲಿ ಹಲವು ಬಾರಿ ಕರ್ನಾಟಕ ವತಿಯಿಂದ ಜಂಟಿ ಸಭೆಗಳನ್ನು ಕರೆಯಲಾಗಿ, ತಮಿಳುನಾಡು ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಹಾಗೂ ಮುಖ್ಯ ಕಾರ್ಯದರ್ಶಿಯವರ ಹಂತದಲ್ಲಿ ಪತ್ರ ವ್ಯವಹಾರ ನಡೆಸಲಾಗಿದೆ.

(ಆ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;